ಕೂಡ ಕಲಿಸುತ್ತಿದ್ದರು. ಆಸ್ಪತ್ರೆಯಲ್ಲಿ ಇವರೊಡನೆ ಇರಲು ಬಂದಿದ್ದ ಶಿಷ್ಯ, ಪುಣೆಯ ಅನುಪಮ್ ಜೋಶಿಗೆ ಆಸ್ಪತ್ರೆಯಲ್ಲಿಯೂ ಸರೋದ್ ಕಲಿಸುತ್ತಿದ್ದರು. ಮಲಗಿದಲ್ಲಿಯೇ ಹಾಡುತ್ತಿದ್ದರು. ಅದನ್ನು ಅನುಪಮ್ ಸರೋದ್‌ನಲ್ಲಿ ನುಡಿಸುತ್ತಿದ್ದರು. ಕಲಿಸುವುದು ಇವರಿಗೆ ಒಂದು ಪ್ಯಾಷನ್ ಆಗಿತ್ತು. ಅದಕ್ಕೊಂದು ಹೊತ್ತು ಗೊತ್ತು ಇರಲಿಲ್ಲ. 12 ವರ್ಷಗಳ ಕಾಲ ಇವರ ಜೊತೆಯಲ್ಲೇ ಇದ್ದು ಸರೋದ್ ಕಲಿಯುತ್ತಿರುವ ಶಿಷ್ಯ ಸಚಿನ್ ಹಂಪಿ ಹೇಳುತ್ತಾರೆ, “ಬೆಳಗ್ಗೆ ಮೂರು ಗಂಟೆಗೆ ಲಹರಿ ಬಂದರೆ ಎಬ್ಬಿಸುತ್ತಿದ್ದರು. ರಾತ್ರಿ ಲಹರಿ ಬಂದರೆ ರಾತ್ರಿ. ಆ ಇಡೀ ಪ್ರಕ್ರಿಯೆಯಲ್ಲಿ ಸ್ನೇಹ, ಪ್ರೀತಿ, ಸಿಟ್ಟು, ಮೆಚ್ಚುಗೆ ಇವೆಲ್ಲವೂ ಇತ್ತು. ನನ್ನ ಕಲಿಕೆಯ ಆರಂಭದ ವರ್ಷಗಳ ರೆಕಾರ್ಡಿಂಗ್ ಕೇಳಿದರೆ, ಅದರಲ್ಲಿ ಪಾಠಕ್ಕಿಂತ ಬೈದಿರುವುದೇ ಹೆಚ್ಚಾಗಿದೆ. ನಂತರದ ದಿನಗಳಲ್ಲಿ ನಾನು ನುಡಿಸಿದ ನಂತರ ಅದಕ್ಕಿಂತ ಭಿನ್ನವಾದ, ಸೃಜನಶೀಲವಾದ ಅಂಶವೊಂದನ್ನು ಆ ರಾಗಕ್ಕೆ ಸೇರಿಸಿ ಹೇಳಿಕೊಡುತ್ತಿದ್ದರು. ರಾಗದ ಅನೂಹ್ಯವಾದ ಸಾಧ್ಯತೆಗಳನ್ನು ತೆರೆದಿಡುತ್ತಿದ್ದರು. ಹೀಗೊಂದು ಸೇರ್ಪಡೆ ಇಲ್ಲದೆ ನನ್ನ ಪಾಠ ಎಂದೂ ಮುಗಿದಿರಲಿಲ್ಲ.” ಹಿರಿಯ ಶಿಷ್ಯ ಸೋಹನ್ ನೀಲಕಂಠ್ ಅವರ ಅನುಭವ ಇನ್ನೊಂದು ಮುಖವನ್ನು ಪರಿಚಯಿಸುತ್ತದೆ. ‘ಒಂದು ದಿನ ಬೆಳಗ್ಗೆ ಮೂರು ಗಂಟೆ. ಮಲಗಿರುವ ಸೋಹನನ್ನು ಯಾರೋ ಕರೆದಂತಾಗುತ್ತದೆ. ಕಣ್ಣು ಬಿಟ್ಟರೆ ಗುರುಗಳು ಕೈಯಲ್ಲಿ ಟೀ ಲೋಟ ಹಿಡಿದು ನಿಂತಿರುತ್ತಾರೆ. ಸೋಹನ್ ಗಲಿಬಿಲಿಗೊಂಡು ಏನೋ ಹೇಳಲು ಹೋಗುತ್ತಾರೆ. “ಮಾತಾಡಬೇಡ. ನಿಶ್ಶಬ್ದವನ್ನು ಹಾಳು ಮಾಡಬೇಡ. ಟೀ ಕುಡಿದು ಸರೋದ್ ತೆಗೆದುಕೊಂಡು ಬಾ” ಎನ್ನುತ್ತಾರೆ. ಲಲಿತ್ ರಾಗವನ್ನು ಹೇಳಿಕೊಡುತ್ತಾ, “ಈ ನಿಶ್ಶಬ್ದತೆ ಈ ಸೊಗಸಾದ ರಾಗ ಕಲಿಯುವುದಕ್ಕೆ ಒಳ್ಳೆಯ ಸಮಯ. ಇಂತಹ ಸೊಗಸಾದ ರಾಗವನ್ನು ಕಲಿಸುವ ಹಾಗೂ ಕಲಿಯುವ ಸಂದರ್ಭದಲ್ಲಿ ಟೀ ಮಾಡಿದ್ದು ಗುರುವೋ, ಅಥವಾ ಶಿಷ್ಯನೋ ಅನ್ನೋದು ಹೇಗೆ ಮುಖ್ಯವಾಗುತ್ತೆ” ಅಂತ ಪಾಠ ಮುಂದುವರಿಸಿದರಂತೆ.

ಸಾಮಾನ್ಯವಾಗಿ ತಾವು ರಿಯಾಜ್ ಮಾಡುವಾಗ ಸಂಗೀತಗಾರರು ಅಲ್ಲಿ ಯಾರನ್ನೂ ಇರಗೊಡುವುದಿಲ್ಲ. ಆದರೆ “ನಮ್ಮ ಗುರುಗಳು ತಾವು ರಿಯಾಜ್ ಮಾಡುವಾಗಲೂ ನಮ್ಮನ್ನು ಅಲ್ಲಿಯೇ ಇರಲು ಅವಕಾಶ ಮಾಡಿಕೊಡುತ್ತಿದ್ದರು. ರಿಯಾಜ್ ಸಮಯದಲ್ಲಿ ತಪ್ಪಾಗುತ್ತಿತ್ತು. ಅದನ್ನು ಸರಿಪಡಿಸಿಕೊಳ್ಳುತ್ತಿದ್ದರು. ತಪ್ಪಿನಿಂದ ಪರಿಪೂರ್ಣತೆಯ ಕಡೆಗೆ ಅವರು ಸಾಗುತ್ತಿದ್ದ ಪ್ರಕ್ರಿಯೆಯನ್ನು ಗಮನಿಸಲು, ಅದರಿಂದ ಕಲಿಯಲು ಅವಕಾಶ ಮಾಡಿಕೊಡುತ್ತಿದ್ದರು. ತಮ್ಮ ಮಿತಿಗಳನ್ನು ಅವರು ಹೇಗೆ ಮೀರಿಕೊಳ್ಳುತ್ತಿದ್ದರು ಎನ್ನುವುದನ್ನು ಅರ್ಥೈಸಿಕೊಳ್ಳಲು ಮತ್ತು ಅದನ್ನು ಅಳವಡಿಸಿಕೊಳ್ಳಲು ನಮಗೆ ಸಾಧ್ಯವಾಗುತ್ತಿತ್ತು” ಎಂದು ಸಚಿನ್ ನೆನಪಿಸಿಕೊಳ್ಳುತ್ತಾರೆ. ತಾರಾನಾಥರು ಸಂಗೀತವನ್ನು ವೈಯಕ್ತಿಕವಾಗಿ ಕಲಿಸಬೇಕು ಅಂತ ನಂಬಿದ್ದವರು. ಹಾಗಾಗಿ ವಿಶ್ವವಿದ್ಯಾನಿಲಯಗಳಲ್ಲಿ ಕಲಿಸುವ ಬಗ್ಗೆ ಅವರಿಗೆ ಅಂತಹ ಖುಷಿಯೇನಿರಲಿಲ್ಲ.

ಅವರಿಗೆ ಸಂಗೀತ ಮತ್ತು ಬದುಕು ಎಂದೂ ಬೇರೆ ಬೇರೆಯಾಗಿರಲೇ ಇಲ್ಲ. ಅವರು ತಮ್ಮೆಲ್ಲಾ ಶಿಷ್ಯರಿಗೆ ಸಂಗೀತದ ಜೊತೆಗೆ ಅಡುಗೆ ಮುಂತಾದ ಹಲವು ಕೆಲಸಗಳನ್ನು ಕಲಿಸುತ್ತಿದ್ದರು. ಅವರ ಅಮೆರಿಕದ ವಿದ್ಯಾರ್ಥಿ ಲೆಸ್ಲಿ ಸ್ನೈಡರ್, ಅಹಮದಾಬಾದಿನ ಹಿರಿಯ ಶಿಷ್ಯ ಸೋಹನ್ ನೀಲಕಂಠ್ ಹಾಗೂ ಸಂಗೀತದ ಶಿಷ್ಯರಲ್ಲದ ನಮಗೆ ಅವರು ಹಲವು ಅಡುಗೆಗಳನ್ನು- ಉದಾಹರಣೆಗೆ: ದಾಲ್, ಟೊಮ್ಯಾಟೋ ಉಪ್ಪಿಟ್ಟು, ಅಣ್ಣೈ ಕತ್ತರಿಕಾಯಿ ಮುಂತಾದುವನ್ನು- ಹೇಳಿಕೊಟ್ಟದ್ದರು. ಸ್ವತಃ ಅವರು ಉಸ್ತಾದ್ ಅಲ್ಲಾ ರಖ್ಖಾ ಅವರ ಸೇವೆ ಮಾಡುತ್ತಾ ತಬಲಾದ ಸೂಕ್ಷ್ಮಗಳ ಜೊತೆಗೆ ಮಟನ್ ಕರಿ, ಬಿರಿಯಾನಿ ಇವುಗಳನ್ನು ಮಾಡುವುದನ್ನು ಕಲಿತಿದ್ದೆ ಎಂದು ಅದರ ರೆಸಿಪಿಯನ್ನು ಹೇಳುತ್ತಿದ್ದರು.

ರಾಜೀವ ಅವರು ಹಲವರಿಗೆ ಹಲವು ರೀತಿಯ ಖಾಲಿತನವನ್ನೂ ಕಂದಕಗಳನ್ನೂ ಬಿಟ್ಟು ಹೋಗಿದ್ದಾರೆ. ಶಿಷ್ಯರಿಗೆ ಖಾನ್ ಸಾಹೇಬರ ಸಂಗೀತವನ್ನು ಅಷ್ಟೊಂದು ಮುಂದಕ್ಕೆ ಒಯ್ದಿರುವ ಮತ್ತೊಬ್ಬ ಗುರು ಸಿಗುವುದಿಲ್ಲ. ಆತ್ಮೀಯರಿಗೆ ನೆಚ್ಚಿನ ಗೆಳೆಯರಿಲ್ಲ. ನೊಂದವರಿಗೆ ಸಾಂತ್ವನ ಹೇಳುವರಿಲ್ಲ. ತಿಳಿಯ ಬಯಸುವವರಿಗೆ ಅಂತಹ ಜ್ಞಾನನಿಧಿಯಿಲ್ಲ. ಇಂತಹವರು ಇದ್ದರೇ ಅನ್ನುವ ಅಚ್ಚರಿ ಮೂಡಿಸುವ ವ್ಯಕ್ತಿ ಅವರು. ಹೋಗಿ ಬನ್ನಿ, ಗುರುಗಳು ನಿಮಗಾಗಿ ಕಾದಿದ್ದಾರೆ ಅನ್ನೋದು ಕ್ಲೀಷೆಯಾಗುತ್ತದೆ.

●